**ದಿನಾಂಕಃ 06.07.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಬಿ ಎಸ್ ಹೆಚ್ ವಕೀಲರಿಂದ**.

ದಾವಾ ಜಮೀನು ನನಗೆ ಬೇಕು ಎಂದು ಖರೀದಿ ಕರಾರುಪತ್ರ ಮಾಡಿಕೊಂಡಿರುತ್ತೇನೆ ಅಂದರೆ ಸರಿ. ದಾವಾ ಜಮೀನು ಪ್ರತಿವಾದಿಯವರ ತಂದೆಗೆ 1989 ರ ಪೂರ್ವದಲ್ಲೆ ಮಂಜೂರಾಗಿತ್ತು ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿಯ ತಂದೆ ಮರಣ ಹೊಂದಿದ ನಂತರ ದಾವಾ ಜಮೀನು 2001 ರಲ್ಲಿ ಪ್ರತಿವಾದಿಯ ಹೆಸರಿಗೆ ವಾರಸಾ ಮೂಲಕ ಖಾತೆಯಾಗಿರುತ್ತದೆ ಅಂದರೆ ಸರಿ. ಕರಾರುಪತ್ರ ಬರೆಸಿಕೊಳ್ಳುವ ಸಮಯದಲ್ಲಿ ದಾವಾ ಸ್ವತ್ತು ಮಂಜೂರಾಗಿ 26 ವರ್ಷ ಆಗಿತ್ತು ಅಂದರೆ ಸರಿ. ದಾವಾ ಸ್ವತ್ತಿನ ಬಗ್ಗೆ ಕರಾರುಪತ್ರ ಮಾಡಿಕೊಳ್ಳಲು ಕಾನೂನಿನ ಯಾವುದೇ ಅಡತಡೆ ಇರಲಿಲ್ಲ ಅಂದರೆ ಸಾಕ್ಷಿ ನಾನು ಪ್ರತಿವಾದಿಗೆ ಕರಾರುಪತ್ರ ಬರೆದುಕೊಡು ಎಂದು ಕರೆದರೂ ಸಹ ಬಂದಿರುವುದಿಲ್ಲ ಎನ್ನುತ್ತಾರೆ. ದಿನಾಂಕಃ 31.03.2016 ರೊಳಗೆ ದಾವಾ ಆಸ್ತಿಯ ಬಗ್ಗೆ ಕ್ರಯಪತ್ರ ಮಾಡಿಸಿಕೊಳ್ಳಲು ನಾನು ಸಿದ್ದತೆ ಮಾಡಿಕೊಂಡಿರಲಿಲ್ಲ ಅಂದರೆ ಸರಿಯಲ್ಲ. ಮುಂಗಡ ಹಣ ಮತ್ತು ಬಡ್ಡಿ ವಾಪಸ್ಸು ಬೇಕೆಂದು ವಾದಪತ್ರ ತಿದ್ದುಪಡಿ ಮಾಡಿಕೊಂಡು ಇತ್ತೀಚೆಗೆ ಕೇಳಿರುತ್ತೇನೆ ಅದಕ್ಕೂ ಪೂರ್ವದಲ್ಲಿ ಕೇಳಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ ಮುಂಗಡ ಹಣ ಮತ್ತು ಅದಕ್ಕೆ ಬಡ್ಡಿ ವಾಪಸ್ಸು ಕೊಡಲು ಬದ್ಧನಿರುವುದಿಲ್ಲ ಅಂದರೆ ಸರಿಯಲ್ಲ. ಮುಗಂಡ ಹಣ ವಾಪಸ್ಸು ಬೇಕೆಂದು ಬಹಳಷ್ಟು ಕಾಲ ವಿಳಂಬ ಮಾಡಿ ಕೇಳಿರುತ್ತೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.